there will be transparency in that. ಅದೇ ಒಂದು ನನ್ನ ಪ್ರಶ್ನೆ. But, I welcome this. Till the procurement is made, you are sending the children to Engineering Colleges. That is really very good. ಸಲಹೆಗಳನ್ನು ಕೊಟ್ಟಿದ್ದಾರೆ so that students should not suffer. ಅದು decentralize ಆ selection ಬಗ್ಗೆ ತಾವು ಹೇಳಬಿಡಿ. ಏಕೆಂದರೆ, ತಾವು ಸಾಕಷ್ಟು purchase ಮಾಡಬೇಕು. ಅದರ ಸಲುವಾಗಿ ಆ question ಅನ್ನು ನಾನು ತಮಗೆ ಕೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಸದಸ್ಯರಿಗೆ ಅದು ಗೊತ್ತಿದೆ. ಹಿಂದೆ ಎಲ್ಲ 7,8,10 ITI ಗಳನ್ನು ಕೊಟ್ಟುಕೊಂಡು ಬರುತ್ತಿದ್ದರು. ಕಳೆದ ವರ್ಷ ಒಂದೇ ಬಾರಿಗೆ 37 ITI ಗಳನ್ನು ಮಂಜೂರು ಮಾಡಿದ್ದರಿಂದಾಗಿ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಾನು ಅದರ ಬಗ್ಗೆ ನೋಡುತ್ತೇನೆ. Division-wise decentralize ಆದರೆ ಒಳ್ಳೆಯದು. 5 Division ಗಳಿವೆ. ಆ ರೀತಿ Division-wise decentralize ಮಾಡುವುದಕ್ಕೆ permission ತೆಗೆದುಕೊಂಡು ಆ ಅಗತ್ಯತೆಗಳನ್ನು ಮಾಡಿಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರು, ITI ಯಲ್ಲಿ ಪೀಠೋಪಕರಣಗಳ ಖರೀದಿಯಲ್ಲಿ ಬಹಳ ಅವ್ಯವಹಾರವಾಗಿದೆ.

ಅಧ್ಯಕ್ಷರು: ಈಗ ಬೇಡ. ಸಮಯವಾಗಿದೆ. ಮತ್ತೊಂದು ಸಲ ಅವಕಾಶ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಕೋಟಿಗಟ್ಟಲೆ ಅವ್ಯವಹಾರವಾಗಿದೆ.

ಅಧ್ಯಕ್ಷರು: please ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು: ಒಂದು ಕೋಟಿ ರೂ.ಗಿಂತ ಹೆಚ್ಚು ಅವ್ಯವಹಾರವಾಗಿದೆ.

ಅಧ್ಯಕ್ಷರು: ಆಯಿತು ಬಿಡಿ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

195 ಡಾ: ಬಗಲಿ ಸರ್ವಭೌಮ ಸಶಗೌಡ (ಇಂಡಿ) :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಿನಾಂಕ: 29–07–2000 ರಿಂದ 04–07–2004ರ ವರೆಗೆ ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ತಾಲ್ಲೂಕು ಆರೋಗ್ಯಾಧಿಕಾರಿಯವರು 6,89,695 (ಆರು ಲಕ್ಷದ ಎಂಬತ್ತೊಂಬತ್ತು ಸಾವಿರದ ಆರನೂರ ತೊಂಬತ್ತೈದು) ರೂಪಾಯಿಗಳನ್ನು ದುರುಪಯೋಗ ಪಡಿಸಿಕೊಂಡಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಳಗಾವಿ ಇವರ ಲೆಕ್ಕ ಪರಿಶೋಧನಾ ಸಮಿತಿ ದಿನಾಂಕ: 07-07-2005 ರಂದು ನೀಡಿದ ವರದಿಯನ್ನು ಆಯುಕ್ತರು ಮತ್ತು ಪ್ರಧಾನ ಕಾರ್ಯದರ್ಶಿಗಳ ಕಾರ್ಯಾಲಯದಲ್ಲಿ ಮುಕ್ತಾಯಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು;

(ಇ) ಸದರಿ ವೈದ್ಯಾಧಿಕಾರಿಗಳು ಜುಲೈ 31, 2008 ರಂದು ಸೇವಾ ನಿವೃತ್ತಿ ಹೊಂದಲಿರುವುದರಿಂದ ಅವರ ಮೇಲೆ ಸರ್ಕಾರವು ಕ್ರಮಕೈಗೊಳ್ಳುವುದೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

(ಅ) ಬಂದಿದೆ

(ಆ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಳಗಾವಿ ಇವರ ಲೆಕ್ಕ ಪರಿಶೋಧನಾ ಸಮಿತಿ ದಿ: 7-7-2005ರ ವರದಿ ಮೇರೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರು ತನಿಖೆ ಮಾಡಿ ವರದಿ ನೀಡಲು ಸೂಚಿಸಿದ್ದರು. ಅದರಂತೆ ಜಿಲ್ಲಾ ನೋಡಲ್ ಅಧಿಕಾರಿಗಳಾಗಿದ್ದ ಉಪ ನಿರ್ದೇಶಕರು (ಸಾರ್ವಜನಿಕ ಆರೋಗ್ಯ ಸಂಸ್ಥೆ) ಇವರನ್ನು ಈ ಬಗ್ಗೆ ವಿವರವಾಗಿ ತನಿಖೆ ಮಾಡಿ ವರದಿ ನೀಡಲು ನಿಯೋಜಿಸಲಾಗಿತ್ತು. ಅವರು ತನಿಖೆ ನಡೆಸಿ ಸದರಿ ಆರೋಪಗಳು ರುಜುವಾತು ಆಗಿರುವುದಿಲ್ಲವೆಂದು ವರದಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಆರೋಪಗಳು ನಿರಾಧಾರವೆಂದು ಆಯುಕ್ತರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಪ್ರಕರಣವನ್ನು ಮುಕ್ತಾಯ ಮಾಡಲಾಗಿದೆ.

(ಇ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 195

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಡಾ: ಬಗಲಿ ಸಾರ್ವಭೌಮ ಸಗಗೌಡ: ಆಯುಕ್ತರು ಈ ಆರೋಪಗಳು ನಿರಾಧಾರವೆಂದು ವರದಿ ನೀಡಿದ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ, ಲೆಕ್ಕಪರಿಶೋಧನಾ ಸಮಿತಿ ಲೆಕ್ಕಪತ್ರಗಳನ್ನು, vouchers ಅನ್ನು, ನಿಯಮಗಳನ್ನು ತಪಾಸಿಸಿ ವರದಿ ನೀಡುತ್ತದೆ. ಆ ವರದಿಗೆ ಆರೋಪ ಎನ್ನುವುದು ಸರಿಯಲ್ಲ. ವರದಿಯ ಮೇಲೆ ಯಾವುದೇ ತನಿಖೆ ನಡೆಸಲು ಅವಕಾಶವಿರುವುದಿಲ್ಲ. ಏಕೆಂದರೆ, Audit Report is a document, which establishes the financial

irregularities. ಅದರ ಮೇಲೆ ಕ್ರಮ ಕೈಗೊಳ್ಳಲೇಬೇಕು. ಅದರ ಮೇಲೆ ಮತ್ತೊಂದು ತನಿಖೆ ನಡೆಸಲು ಯಾವುದೇ ಅವಕಾಶವಿರುವುದಿಲ್ಲ. ಲೆಕ್ಕ ಪರಿಶೋಧನಾ ಸಮಿತಿ ಕೊಟ್ಟ ವರದಿಯ ಮೇಲೆ ಸಂಬಂಧಿಸಿದ ಅಧಿಕಾರಿಗಳಿಂದ ನಾವು ಅನುಸರಣಾ ವರದಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಈ ಅಧಿಕಾರಿಯಿಂದ ಅನುಸರಣಾ ವರದಿಯನ್ನು ಯಾವತ್ತು ಪಡೆದರು? ಅದರ ಮೇಲೆ ಏನು ಕ್ರಮ ತೆಗೆದುಕೊಂಡರು ಎನ್ನುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಮೂರನೆಯದಾಗಿ, ತಾಲ್ಲೂಕು ಆರೋಗ್ಯಾಧಿಕಾರಿ, ಉಪ ನಿರ್ದೇಶಕರು ಆರೋಗ್ಯ ಸಂಸ್ಥೆ ಇವರಿಬ್ಬರೂ ಒಂದೇ cadreನ ಅಧಿಕಾರಿಗಳು. ಒಂದೇ cadreನ ಅಧಿಕಾರಿ ಮೇಲೆ complaint ಬಂದಾಗ ಅದೇ cadreನ ಅಧಿಕಾರಿಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ, ಉಪ ನಿರ್ದೇಶಕರು ನೀಡಿರುವ ಯಾವುದೇ ವರದಿಗೆ ಯಾವುದೇ ಬೆಲೆ ಇಲ್ಲ. ಉಪ ನಿರ್ದೇಶಕರು ತನಿಖೆ ನಡೆಸಿ ಈ ತನಿಖಾ ವರದಿ ಮಾಡಿದ ಆರೋಪಗಳು ನಿರಾಧಾರವೆಂದರೆ ಈ ತನಿಖಾ ವರದಿಯನ್ನು ಕೈಗೊಂಡ teamನ ಮೇಲೆ ಈ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ. ಶ್ರೀರಾಮುಲು: ಮಾನ್ಯ ಸಭಾಧ್ಯಕ್ಷರೆ, Docky ಎನ್ನುವವರು ತಾಲ್ಲೂಕು ಆರೋಗ್ಯಾಧಿಕಾರಿಗಳಾಗಿ ದಿನಾಂಕ: 29–7–2000 ರಿಂದ 4–7–2004ರ ವರೆಗೆ ಅಲ್ಲಿ ಕಾರ್ಯನಿರ್ವಹಿಸಿದ್ದರು. ಹಣಕಾಸಿನ ದುರುಪಯೋಗ ಮಾಡಿಕೊಂಡಿದ್ದಾರೆಂದು ಕಲ್ಲಪ್ಪ, ಅಧ್ಯಕ್ಷರು, ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆಯವರು ಬೆಳಗಾಂನಿಂದ ಅವರ ಮೇಲೆ ಆರೋಪ ಮಾಡಿದ್ದರು. ನಂತರ, ನಮ್ಮ ಅಧಿಕಾರಿಗಳೆಲ್ಲರೂ ಕೂಡ ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆಯ ಅಧ್ಯಕ್ಷರಾದ ಕಲ್ಲಪ್ಪನವರು ಎಲ್ಲಿದ್ದಾರೆಂದು ಬಹಳಷ್ಟು ತನಿಖೆಯನ್ನು ಮಾಡಿದರೂ ಕೂಡ ಅವರು ನಾಪತ್ತೆಯಾಗಿ ಅವರು ಎಲ್ಲಿದ್ದಾರೆನ್ನುವುದು ಗೊತ್ತಾಗದ ಸಂದರ್ಭದಲ್ಲಿ ಎಲ್ಲಾ ರೀತಿಯ ಕ್ರಮಗಳನ್ನು ನೋಡಿಕೊಂಡು ದಿನಾಂಕ: 17–9–2007ರಲ್ಲಿ ನಮ್ಮ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯಲ್ಲಿ ಅವರಿಗೆ 'ನಿರಾಧಾರ' ಎಂದು ತೀರ್ಮಾನ ತೆಗೆದುಕೊಂಡು ಎಲ್ಲಾ ರೀತಿಯಾಗಿ ಕೂಡ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ.

ಡಾ: ಬಗಲಿ ಸಾರ್ವಭೌಮ ಸಶಗೌಡ: ಲೆಕ್ಕ ಪರಿಶೋಧನಾ ಸಮಿತಿಯು ನೀಡಿದ ವರದಿಯ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಎಂದು ನಾನು ಪ್ರಶ್ನೆ ಕೇಳಿದ್ದೇನೆ.

Audit Report ಅನ್ನು you cannot treated as a complaint? It is a document, action has to be taken.

ಅಧ್ಯಕ್ಷರು: ಬಗಲಿಯವರೆ, ನೀವು allegations, enquiry ಸರಿಯಿಲ್ಲವೆನ್ನುವುದು, ಯಾವ officer ಮಾಡಿದ್ದಾರೆ, ಆ cadre ಸರಿಯಿಲ್ಲವೆನ್ನುವುದು ನಿಮ್ಮ ಪ್ರಶ್ನೆಯಾಗಿದೆ. ನೀವು ವೈಯಕ್ತಿಕವಾಗಿ ಆರೋಗ್ಯ ಸಚಿವರನ್ನು ಭೇಟಿಯಾಗಿ ಅವರ ಛೇಂಬರ್‌ನಲ್ಲಿಯೇ ಕುಳಿತು discussion ಮಾಡಿ.

ಡಾ: ಬಗಲಿ ಸಾರ್ವಭೌಮ ಸತಗೌಡ: I met Secretary and its Commissioner. Nobody is ready to give the report.

ಅಧ್ಯಕ್ಷರು: ಸಚಿವರೆ, ಸದಸ್ಯರನ್ನು ಕರೆಸಿ detail ಆದ discussion ಮಾಡಿ ಅವರು ಏನು ಕೇಳಿದ್ದಾರೆ ಅದಕ್ಕೆ ಸರಿಯಾದ ಪರಿಹಾರ ಒದಗಿಸಿ.

(ಗೊಂದಲ)

ಡಾ: ಬಗಲಿ ಸಾರ್ವಭೌಮ ಸತಗೌಡ: ಅವರು ಆ ಅಧಿಕಾರಿಯ ಅನುಸರಣಾ ವರದಿ ಮತ್ತು ತನಿಖಾ ವರದಿಯನ್ನು ಮಂಡಿಸಲಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾದ ಆರೋಪವಿದೆ.

(ಗೊಂದಲ)

ಅಧ್ಯಕ್ಷರು: ಗುರುಪಾದಪ್ಪ ನಾಗಮಾರಪಲ್ಲಿಯವರೆ, ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರು time ಕೇಳಿದ್ದಾರೆ. ಅಷ್ಟರಲ್ಲಿ Assembly ಮುಗಿದುಹೋಗುತ್ತದೆ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾದ ಆರೋಪವಿದೆ. (ಗೊಂದಲ) ಇದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಭ್ರಷ್ಟಾಚಾರ ಗಗನಕ್ಕೇರುತ್ತಿದೆ. Audit Report ಮೇಲೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ಅದನ್ನೆಲ್ಲ ಇಲ್ಲಿ Assembly ಯಲ್ಲಿ ಪೂರ್ತಿ detail ಆಗಿ discussion ಮಾಡಲಿಕ್ಕೆ ಆಗುವುದಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ರೂಪದಲ್ಲಿ notice ಕೊಡಿ. ಆಗ discussion ಗೆ ಅವಕಾಶ ಕೊಡುತ್ತೇನೆ. Question Hour ನಲ್ಲಿ discussion ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇದು ಬಹಳ ಗಂಭೀರ ಆರೋಪವಿದೆ.

ಅಧ್ಯಕ್ಷರು: ಈ ಅವಧಿಯಲ್ಲಿ ಎಲ್ಲವನ್ನೂ discussion ಮಾಡಲಿಕ್ಕಾಗುವುದಿಲ್ಲ. ಅವರು ಹೇಳಿದ್ದಾರೆ. ನಾನು suggestion ಹೇಳಿದ್ದೇನೆ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸದನವನ್ನು ಸುಮ್ಮನೆ ಕೇವಲ ಕಾಟಾಚಾರಕ್ಕೆ ನಡೆಸುವುದಕ್ಕಾಗುವುದಿಲ್ಲ. (ಗೊಂದಲ) ಅವರು ನಿರ್ದಿಷ್ಟವಾದ ಆರೋಪ ಮಾಡುತ್ತಿದ್ದಾರೆ. ಆ ಆರೋಪಕ್ಕೆ Audit Report ಇದೆಯೆಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇದಕ್ಕೆ ಅವಕಾಶ ಕೊಡದಿದ್ದರೆ ಭ್ರಷ್ಟಾಚಾರಕ್ಕೆ ನೀವು ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ.

(ಗೊಂದಲ)

ಅಧ್ಯಕ್ಷರು: ವಕ್ಫ್ ಸಚಿವರೆ ಉತ್ತರ ಹೇಳಿ. (ಗೊಂದಲ) ನೋಡಿ, ನಾನು ನಿಮಗೆ allow ಮಾಡಿಲ್ಲ. ಶರಣ ಪ್ರಕಾಶ್ ರವರೆ ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ನಾನು ನಿಮಗೆ allow ಮಾಡಿಲ್ಲ. please, ಕುಳಿತುಕೊಳ್ಳಿ. ಎಲ್ಲದಕ್ಕೂ ನೀವು ಮಾತನಾಡಬೇಡಿ. ಎಲ್ಲದಕ್ಕೂ ನೀವು ಈ ರೀತಿ intervene ಮಾಡಬೇಡಿ. ಪ್ರಶ್ನೋತ್ತರ ಕಾಲದಲ್ಲಿ ಎಲ್ಲವನ್ನೂ discussion ಮಾಡಲಿಕ್ಕೆ ಆಗುವುದಿಲ್ಲ. (ಗೊಂದಲ) ಗುರುಪಾದಪ್ಪ

ನಾಗಮಾರಪಲ್ಲಿಯವರೆ ಪ್ರಶ್ನೆ ಕೇಳಿ. (ಗೊಂದಲ) ನೀವು ಕುಳಿತುಕೊಳ್ಳಿ. Question Hour ನಲ್ಲಿ ಒಂದೇ ಪ್ರಶ್ನೆಗೆ ಎಲ್ಲರೂ ಪ್ರಶ್ನೆ ಕೇಳುವುದಕ್ಕಾಗುವುದಿಲ್ಲ. (ಗೊಂದಲ) ಅವರು ಬೇಕಾದರೆ ಬೇರೆ ರೂಪದಲ್ಲಿ ಚರ್ಚೆಗೆ notice ಕಳುಹಿಸಿಕೊಡಲಿ. ನಾನು discussion ಗೆ allow ಮಾಡುತ್ತೇನೆ. Question Hour ನಲ್ಲಿ detail ಆಗಿ discussion ಮಾಡುವುದಕ್ಕಾಗುವುದಿಲ್ಲ. ಅವರು ಏನು ಪ್ರಶ್ನೆ ಕೇಳಿದ್ದಾರೋ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಮತ್ತೆ detail ಆಗಿ ಕೇಳಿದಾಗ ಕರೆದು ಮಾತನಾಡಿ ಎಂದು ಹೇಳಿದ್ದೇನೆ. (ಗೊಂದಲ) ಶರಣ ಪ್ರಕಾಶ್ ರವರೆ ಕುಳಿತುಕೊಳ್ಳಿ. please ಕುಳಿತುಕೊಳ್ಳಿ. ಸಾಕಿನ್ನು. (ಗೊಂದಲ) It is too much. ಕುಳಿತುಕೊಳ್ಳಿ. (ಗೊಂದಲ) ಆಯಿತು ಬಿಡಿ. (ಗೊಂದಲ) ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆಗೆ ಸಂಬಂಧಿಸಿದಂತೆ, ವಕ್ಫ್ ಸಚಿವರೆ, next week ನಲ್ಲಿ 28, 29ನೇ ತಾರೀಖಿನಂದು ಉತ್ತರ ತರಿಸಿಕೊಡಬೇಕು. Session ಮುಗಿಯುತ್ತದೆ. Next week ನಲ್ಲಿ ನೀವು ಉತ್ತರ ಕೊಡಬೇಕು. ಉತ್ತರವನ್ನು ತಕ್ಷಣ ready ಮಾಡಿಕೊಡಿ. next ಸೋಮವಾರ, ಮಂಗಳವಾರ ನೀವು ಕೊಡಲೇಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸೋಮವಾರ ಕೊಡುತ್ತೀರಾ? Assembly ಆದ ಮೇಲೆ ಕೊಡುತ್ತೀರಾ?

ಅಧ್ಯಕ್ಷರು: ಅದಕ್ಕಿಂತ ಮುಂಚೆ ಕೊಡುತ್ತಾರೆ.

ಶ್ರೀ ಮುಮ್ತಾಜ್ ಅಲಿಖಾನ್: ಮಾನ್ಯ ಅಧ್ಯಕ್ಷರೆ, ಮುಂದಿನ ಪ್ರಶ್ನೋತ್ತರದ ದಿವಸ ಕೊಡುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮುಂದಿನ ಪ್ರಶ್ನೋತ್ತರದ ದಿವಸ ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

211 ಶ್ರೀ ಶ್ರೀನಿವಾಸ್ ಎಂ. :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಆಯುರ್ವೇದ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);